

# ವಿದ್ಯಾರ್ಥಿಗಳೂ, ಜವಾಬ್ದಾರಿಯೂ..

★ ಎಲ್. ಗಿರಿಜಾರಾಜ್

ಇಂದಿನ ಶಿಕ್ಷಣ ಪರಿಸರ, ವ್ಯವಸ್ಥೆಗಳು, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಗೊಳ್ಳುತ್ತಿರುವ ರೀತಿ, ತಾಯ್ತಂದೆಯರ ಧೋರಣೆಗಳು, ಅನೇಕ ಕಾರಣಗಳಿಂದಾಗಿ ಉತ್ಸಾಹ ಕಳೆದುಕೊಳ್ಳುತ್ತಿರುವ ಶಿಕ್ಷಕರು– ಎಲ್ಲವೂ ಗೊಂದಲಮಯ, ನಿರಾಶಾದಾಯಕ ಭಾವನೆಗಳಿಗೆ ಇಂಬು ಕೊಡುತ್ತಿವೆ. ಇದಕ್ಕಾಗಿ ಶಿಕ್ಷಕ ಸಮುದಾಯವನ್ನು ದೂರುವುದಾಗಲೀ, ಸಾರಾ ಸಗಟಾಗಿ ವಿದ್ಯಾರ್ಥಿಗಳ ಮೇಲೆ ದೋಷಾರೋಪಣೆ ಮಾಡುವುದಾಗಲೀ ಸರಿಯಲ್ಲ. ಹಾಗೆಯೇ ಪೋಷಕರು ಅಥವಾ ಕಾಲೇಜುಗಳ ಆಡಳಿತ ಮಂಡಳಿ ಜವಾಬ್ದಾರಿ ಸರಿಯಾಗಿ ನಿರ್ವಹಿಸುತ್ತಿಲ್ಲ ಎನ್ನುವುದಾಗಲೀ ಅರ್ಥಹೀನ. ಆದರೆ, ಒಂದಂತೂ ನಿಜ– ಎರಡು ಮೂರು ದಶಕಗಳ ಹಿಂದಿನ ವಿದ್ಯಾರ್ಥಿಗಳಿಗೂ, ಈಗಿನ ವಿದ್ಯಾರ್ಥಿಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ.

ಅದಕ್ಕೂ ಕಾರಣಗಳಿವೆ. ಇಂದಿನ ವಿದ್ಯಾರ್ಥಿಗಳನ್ನು ರೂಪಿಸುತ್ತಿರುವ ಪ್ರಬಲ ಶಕ್ತಿಗಳೇ ಬೇರೆ! ಜಾಗತೀಕರಣದಿಂದಾಗಿ 'ವಿಶ್ವ ಅಂಗೈ ಮೇಲೆ' ಎನ್ನುವಂತಾಗಿರುವ ಯುಗದಲ್ಲಿ ಈಗಿನ ವಿದ್ಯಾರ್ಥಿಗಳಿದ್ದಾರೆ. ವಿಶ್ವದ ಮೂಲೆ ಮೂಲೆಯ ವಿದ್ಯಮಾನಗಳನ್ನು ಕ್ಷಣಾರ್ಧದಲ್ಲಿ ತಲುಪಿಸುವ ಆಧುನಿಕ ಯಂತ್ರಗಳಿವೆ. ತಂತ್ರಜ್ಞಾನದ ಎಲ್ಲ ಆಗುಹೋಗುಗಳಿಗೂ ವಿದ್ಯಾರ್ಥಿಗಳು ಹೆಚ್ಚು ಮುಕ್ತವಾಗಿ ತೆರೆದುಕೊಂಡಿದ್ದಾರೆ. ಎರಡನೆಯ ತರಗತಿಯಲ್ಲಿ ಓದುವ ಪುಟ್ಟ ವಿದ್ಯಾರ್ಥಿಯೊಬ್ಬ ಮೊಬೈಲನ್ನು ಆಟದ ಗಿಲಕಿಯಂತೆ ಕೈಯಲ್ಲಿ ಹಿಡಿದು ಆಡಿಸುವ ರೀತಿಯಾಗಲೀ, ಲೀಲಾಜಾಲವಾಗಿ ಕಂಪ್ಯೂಟರ್ ಗುಂಡಿಗಳನ್ನು ಒತ್ತುತ್ತ, ಮೌಸ್ ಓಡಾಡಿಸುವ ಪರಿಯಾಗಲೀ ಮೂರು ದಶಕಗಳ ಹಿಂದೆ ಕನಸಿನಲ್ಲೂ ಕಲ್ಪಿಸಲಾಗದ್ದು.

ಇವೆಲ್ಲ ಆಧುನಿಕ ಯಂತ್ರ, ಸೌಕರ್ಯಗಳಿಂದ, ವಿಶ್ವವನ್ನರಿತ ತಿಳುವಳಿಕೆಯಿಂದ ಜ್ಞಾನದ ವಿಕಸನ ಹೆಚ್ಚಾಗಿ, ಹಿಂದಿನ ವಿದ್ಯಾರ್ಥಿಗಳಿಗಿಂತ, ಇವನಲ್ಲಿ ಹೆಚ್ಚಿನ ಶ್ರದ್ಧೆ, ಸಂಸ್ಕೃತಿ, ಉನ್ನತ ನಡವಳಿಕೆ, ಗಾಂಭೀರ್ಯ ಮೈಗೂಡಿಸಿಕೊಂಡು ಗುರುವನ್ನು ಮೀರಿದ ಶಿಷ್ಯರಾಗಿದ್ದಾರೆಯೇ? ಉತ್ತರ ನಿರಾಶಾದಾಯಕ. ಅಂದಾಜು ಶೇಕಡಾ 30ರಷ್ಟು ಸೂಕ್ಷ್ಮಗ್ರಾಹಿಗಳು, ಜವಾಬ್ದಾರಿ ಉಳ್ಳ ಕೆಲವರನ್ನು ಬಿಟ್ಟರೆ ಶೇಕಡಾ 70 ರಷ್ಟು ವಿದ್ಯಾರ್ಥಿಗಳು ಸಂವೇದನಾಶೀಲತೆ ಕಳೆದುಕೊಂಡಿದ್ದಾರೆ.

ನಮ್ಮ ವಿದ್ಯಾರ್ಥಿಗಳು ಏನಾಗುತ್ತಿದ್ದಾರೆ? ಎತ್ತ ಕಡೆಗೆ ಹೆಜ್ಜೆಯಿಡುತ್ತಿದ್ದಾರೆ? ಶಿಸ್ತು ಎಂದರೇನೆಂದೇ ಗೊತ್ತಿಲ್ಲದ, ಬೇಜವಾಬ್ದಾರಿಯುತ ಟೀಕೆಗಳೇ ಬುದ್ಧಿವಂತಿಕೆ ಎಂದು ತಿಳಿದುಕೊಂಡಿರುವ, ದೇಶ– ಸಮಾಜದ ರಕ್ಷಣೆಯ ಬಗ್ಗೆ ಎಳ್ಳಷ್ಟೂ ಆಸಕ್ತಿಯಿಲ್ಲದ ವ್ಯಕ್ತಿತ್ವ ನಿರ್ಮಾಣವಾಗುತ್ತಿರುವುದಕ್ಕೆ ಯಾರು ಹೊಣೆ?

ಶಿಕ್ಷಕರಿಗೆ ಕನಿಷ್ಠ ಗೌರವವನ್ನೂ ಕೊಡದೆ, ತಮಗಿಷ್ಟ ಬಂದ ಹಾಗೆ ಎಗ್ಗಿಲ್ಲದೆ ವರ್ತಿಸುವ ವಿದ್ಯಾರ್ಥಿಗಳನ್ನು ಕಂಡಾಗ ಮನಸ್ಸಿಗೆ ಖೇದ, ಸಂಕಟವಾಗುತ್ತದೆ. ಪ್ರತಿ ತರಗತಿಯಲ್ಲಿರುವ ಶೇಕಡಾ 20ರಿಂದ 30ರಷ್ಟು ಉತ್ತಮ ನಡವಳಿಕೆಯ ವಿದ್ಯಾರ್ಥಿಗಳು ಈ ಉಳಿದವರ ಈ ಹುಚ್ಚಾಟಗಳನ್ನು ಪ್ರತಿಭಟಿಸದೆ ಸಹನೆಯಿಂದ ತಾಳಿಕೊಳ್ಳುವುದು ಮತ್ತಷ್ಟು ದುರದೃಷ್ಟಕರ!

ವಿದ್ಯಾರ್ಥಿಗಳ ಅಶಿಸ್ತು, ಅವಿಧೇಯತೆ ವರ್ತನೆಗಳಿಗೆ ಅವರೇ ಪೂರ್ಣ ಹೊಣೆಗಾರರಲ್ಲ ಎಂಬ ಮಾತೂ ನಿಜ! ಹಾಗಾದರೆ ಯಾರು ಹೊಣೆ? ಈ ಸಮಾಜದ ವ್ಯವಸ್ಥೆಯೆ? ಅತ್ಯಾಧುನಿಕ ಸೌಕರ್ಯ ಸುಖಗಳನ್ನು ಒದಗಿಸಿರುವ ಯಂತ್ರಗಳೇ? ಐಷಾರಾಮಿ ಜೀವನ ಶೈಲಿಯೇ? ಸದಾ ಅವರಿಗೆ ಮನರಂಜನೆ ಒದಗಿಸಲು ಕಾದಿರುವ ಬೇಕಾದ್ದು–ಬೇಡದ್ದು, ಶೀಲ–ಅಶ್ಲೀಲ, ಶ್ರೇಷ್ಠ–ಅನಿಷ್ಠ ಎಲ್ಲವನ್ನೂ ತಲೆಗೆ ತುಂಬಲು ತಾ ಮುಂದು ನಾ ಮುಂದು ಎನ್ನುತ್ತಿರುವ ಮಾಧ್ಯಮಗಳೆ?

ಅನೇಕ ಕನ್ನಡ ಉಪನ್ಯಾಸಕರು ಪದವಿಪೂರ್ವ ತರಗತಿಗಳಲ್ಲಿ ಶೇಕಡಾ 40ರಿಂದ 45 ರಷ್ಟು ವಿದ್ಯಾರ್ಥಿಗಳಿಗೆ ಪ್ರಾಥಮಿಕ ಕನ್ನಡ ಉಪಾಧ್ಯಾಯರಾಗಿಯೂ ಕೆಲಸ ಮಾಡಬೇಕಾಗುತ್ತದೆ. ವರ್ಣಮಾಲೆ, ಕಾಗುಣಿತ, ಒತ್ತಕ್ಷರಗಳನ್ನು ಕಲಿಸುವ ತಾಳ್ಮೆ ತೋರಿಸಬೇಕಾಗುತ್ತದೆ. ಕಾಗುಣಿತ ಹೇಳಿಕೊಡುತ್ತಾ ಕುಳಿತರೆ ಪದವಿಪೂರ್ವ ಪಾಠ ಪ್ರವಚನಗಳ ಗತಿಯೇನು? ಪಿಯು ತರಗತಿಗಳಿಂದ ಉತ್ತೀರ್ಣರಾಗಿ ಉನ್ನತ ವಿದ್ಯಾಭ್ಯಾಸದ (ವೈದ್ಯಕೀಯ, ಇಂಜಿನಿಯರಿಂಗ್, ಮುಖ್ಯವಾಗಿ) ಕನಸು ಕಾಣುತ್ತ ಹೊರಟ ವಿದ್ಯಾರ್ಥಿಗಳ ಭವಿಷ್ಯ, ಆಗಾಗ ಬದಲಾಗುತ್ತಿರುವ ಶಿಕ್ಷಣ ನೀತಿ, ಡೊನೇಷನ್ ಹಾವಳಿ, ಸಮರ್ಪಕವಲ್ಲದ ಸೀಟು ಹಂಚಿಕೆಗಳಿಂದಾಗಿ ಡೋಲಾಯಮಾನ ಸ್ಥಿತಿಯಲ್ಲಿರುತ್ತದೆ.

ಇಂದಿನ ಬಹುತೇಕ ತಾಯ್ತಂದೆಯರು ಕುಟುಂಬ ಯೋಜನೆಯಡಿ ಬರುವ ದಂಪತಿಗಳೇ! ಒಂದು ಅಥವಾ ಎರಡು! ಆ ಎರಡು ಮಕ್ಕಳಿಗೆ ಎಲ್ಲಾ ರೀತಿಯ ಸುಖ, ಸೌಕರ್ಯಗಳನ್ನು ಒದಗಿಸಿಕೊಡಲು ತಾಯ್ತಂದೆಯರು ಶತಾಯಗತಾಯ ಪ್ರಯತ್ನಿಸುತ್ತಾರೆ. ಹಿಂದೆ ಆರೇಳು ಮಕ್ಕಳಿದ್ದ ದೊಡ್ಡ ಕುಟುಂಬಗಳಲ್ಲಿ ಮಕ್ಕಳು ತಾವು ಬಯಸಿದುದೆಲ್ಲ ಸಿಗದೆ, ಅನಿವಾರ್ಯವಾಗಿ ಕಷ್ಟಗಳನ್ನು ಅನುಭವಿಸುತ್ತಿದ್ದರು. 'ಜೀವನ' ಎಂದರೆ, ಏನೆಂಬುದು ಅವರಿಗೆ ಮನದಟ್ಟಾಗಿರುತ್ತಿತ್ತು. ಕಷ್ಟಗಳು ಅವನ ಮನಸ್ಸೆಂಬ ಭೂಮಿಯನ್ನು ಹದವಾಗಿಸಿ, ವಿದ್ಯೆಯ ಬೀಜ ಬಿತ್ತಲು ಅನುಕೂಲವಾಗಿರುತ್ತದೆ. ಆದರೆ ಇವತ್ತು ಪರಿಸ್ಥಿತಿ ತದ್ವಿರುದ್ಧ!

ಇವರನ್ನು ತಿದ್ದುವ ಮಾರ್ಗಗಳು ಅನೇಕ ಗೋಚರಿಸಿದರೂ, ಇಂದಿನ ಒತ್ತಡದ ಬದುಕಿನ ಪರಿಸ್ಥಿತಿಯಲ್ಲಿ, ಹೊಸ ಜೀವನಶೈಲಿಯಿಂದಾಗಿ ಅವೆಲ್ಲವೂ ತೊಡಕಿನ ದಾರಿಗಳೇ ಆಗಿರುತ್ತವೆ. ಸಂಸಾರವಂದಿಗನಾದ ಶಿಕ್ಷಕ ತಾಳ್ಮೆ, ಶಾಂತಿ, ಸಮಯ, ಸಂಯಮಗಳನ್ನು ಕಳೆದುಕೊಂಡಿರುತ್ತಾನೆ. ವಿದ್ಯಾರ್ಥಿಗಳೂ ಗಟ್ಟಿ ಮನಸ್ಸು ಮಾಡಿ ಬರುವುದೇ ಕಷ್ಟ! ದೃಶ್ಯಮಾಧ್ಯಮಗಳ ಪ್ರಭಾವ ಇಂದಿನ ವಿದ್ಯಾರ್ಥಿಗಳ ಮೇಲೆ ಅಪಾರ. ಅವುಗಳೋ, ನವನವೀನ ಆಕರ್ಷಕ ಕಾರ್ಯಕ್ರಮ ಆಯೋಜಿಸುತ್ತ, ಪರಸ್ಪರ ಸ್ಪರ್ಧೆಗೆ ಇಳಿದಿವೆ. ಈ ಸ್ಪರ್ಧೆಯ ನಡುವೆ ವಿದ್ಯಾರ್ಥಿಗಳಿಗೆ ಜವಾಬ್ದಾರಿಯನ್ನು ಬೋಧಿಸುವ ಬದಲು ಮನರಂಜನೆಯೇ ಎಲ್ಲವೂ ಎಂಬ ಅನಿಸಿಕೆಯನ್ನು ತುಂಬಲಾಗುತ್ತಿದೆ. ■